ಅಡಿಗರನ್ನು ಕರೆದುಕೊಂಡು ಬರಲು ಕಾರು ಬೇಕೆಂದಾಗ ವ್ಯಾಸನೇ ಕಾರಿನ ವ್ಯವಸ್ಥೆ ಮಾಡಿ ದಿವಾಕರ್ ಜತೆಗೂ ಹೋಗಿ ಅಡಿಗರನ್ನು ಕರೆದು ತಂದಿದ್ದ. 'ಗೀತಮಾಧುರಿ' ಮಾಡುವಾಗ ಅಡಿಗರ ಕವಿತೆಗಳಿಗೆ ಅನುಮತಿ ಕೊಡಿಸಿದ್ದೇ ವ್ಯಾಸ. ಅದಕ್ಕೂ ಮುನ್ನ ಅಡಿಗರ ಮನೆಗೆ ನನ್ನನ್ನು ಕರೆದೊಯ್ದು 'ಅನಾಥೆ' ಕಾದಂಬರಿಯ ಟೆಲಿವಿಷನ್ ಸೀರಿಯಲ್‌ಗೆ ಅನುಮತಿಯನ್ನೂ ಕೊಡಿಸಿದ್ದ. ಆದರೆ, ಅದಕ್ಕೆ ಔಪಚಾರಿಕವಾಗಿ ಒಪ್ಪಿಗೆ ಸಿಗುವ ಮುನ್ನವೇ ಅಡಿಗರು ತೀರಿಹೋದರು. ಆದರೆ, ಅವರ ಹೆಂಡತಿ ಬಳಿ ವ್ಯಾಸ ಅನುಮತಿ ಕೊಡಿಸಿದ್ದ.

ಮುಂದೆ 'ಅನಾಥೆ' ಉದಯ ಟೀವಿಯಲ್ಲಿ 'ಓ ನನ್ನ ಬೆಳಕೆ' ಆಗಿ ಮೂಡಿಬಂತು. ಅದರಲ್ಲಿ ಪಂಚಮಿ, ಶ್ರೀಧರ್ ಅಭಿನಯಿಸಿದ್ದರು. ಇದು ಪ್ರಸಾರವಾದ ಮೇಲೆ ಮೈಸೂರಿನ ವ್ಯಕ್ತಿಯೊಬ್ಬ ನನ್ನ ಮೇಲೆ ಕೇಸ್ ಹಾಕಿಬಿಟ್ಟಿದ್ದ. ಅಡಿಗರು ಆ ವ್ಯಕ್ತಿಗೆ ಕಾದಂಬರಿಯ ಸಿನಿಮಾದ ಹಕ್ಕನ್ನು ನೀಡಿದ್ದರು. ಹತ್ತು ವರ್ಷ ಕಾಲ ಈ ಕೇಸ್ ನಡೆಯಿತು. ಕೊನೆಗೂ ನನ್ನ ಪರವೇ ತೀರ್ಪು ಬಂತು. ಆದರೆ, ಕೇಸ್ ಹಾಕಿದ ವ್ಯಕ್ತಿಗೆ ನನ್ನ ಮೇಲೆ ಯಾವುದೇ ತಕರಾರು ಇರಲಿಲ್ಲ. ಅವನಿಗೆ ತಾನು ನಾಗಾಭರಣ ಮೇಲೆ ಕೇಸ್ ಹಾಕಿದ್ದೇನೆ ಅನ್ನುವುದೇ ಪ್ರತಿಷ್ಠೆಯ ವಿಷಯವಾಗಿತ್ತು. ಹಾಗಾಗಿ, ಪ್ರತಿ ಸಲವೂ ಮೈಸೂರಿನ ಕೋರ್ಟಿಗೆ ಹೋದಾದ ಮಾಧ್ಯಮದವರು ಸೇರುತ್ತಿದ್ದರು. ತಮಾಷೆಯೆಂದರೆ ಕೇಸ್ ಗೆದ್ದ ದಿನ ಒಬ್ಬ ಪತ್ರಕರ್ತನೂ ನನ್ನ ಬಳಿ ಬರಲಿಲ್ಲ! ಆಗ ವ್ಯಾಸ ಮತ್ತು ನಾನೂ ಜತೆಗೂಡಿ ಪತ್ರಿಕಾಗೋಷ್ಠಿ ಮಾಡಿದ್ದೆವು. ಅಷ್ಟು ವರ್ಷಗಳಲ್ಲಿ ಪ್ರತಿಸಲವೂ ಮೈಸೂರಿಗೆ ಹೋದಾಗಲೆಲ್ಲಾ ವ್ಯಾಸ ನನ್ನ ಜತೆಗಿರುತ್ತಿದ್ದ. ಅವನ ಸ್ನೇಹಕ್ಕೆ ಅಂಥ ಗುಣವಿತ್ತು.

ಕೆಲವು ಕೆಲಸಗಳನ್ನು ಕೆಲವರಷ್ಟೇ ಮಾಡಲು ಸಾಧ್ಯ ಅನ್ನುವಂತಿರುತ್ತದೆ. ವ್ಯಾಸ ಅಂಥವರ ಸಾಲಿಗೆ ಸೇರಿದವನು. ನಾವು ಗೆಳೆಯರು ಎಷ್ಟೇ ಕೋಪ ಮಾಡಿಕೊಳ್ಳಲಿ, ಜಗಳ ಮಾಡಿಕೊಳ್ಳಲಿ ಆಗೆಲ್ಲಾ ವ್ಯಾಸನ ಪ್ರೀತಿ ನಮ್ಮನ್ನು ಕಾಪಾಡಿದೆ. ಎಲ್ಲರನ್ನೂ ಸಮಸ್ಥಿತಿಗೆ ತರುವ ಗುಣ ಅವನಲ್ಲಿತ್ತು. ಅವನು ಬಂದರೆ ಸಾಕು ನಗೆಮಲ್ಲಿಗೆ ಹರಡಿಕೊಳ್ಳುತ್ತಿತ್ತು. ಒಂದು ರೀತಿಯ ಆಹ್ಲಾದಕರ ವಾತಾವರಣ ತನ್ನಿಂತಾನೇ ಸೃಷ್ಟಿಯಾಗಿಬಿಡುತ್ತಿತ್ತು.

ಅಷ್ಟೊಂದು ಸಾಹಿತ್ಯ ಕೃಷಿ ಮಾಡಿದ್ದರೂ ವ್ಯಾಸನದು ಸದಾ ತೃಪ್ತ ಭಾವ. ತನಗೆ ಏನು ಸಲ್ಲಬೇಕಿತ್ತೋ ಅದೆಲ್ಲವನ್ನೂ ತನಗೆ ಸಂದಿದೆ ಅನ್ನುವ ಭಾವ ಅವನದಾಗಿತ್ತು. ತನಗೆ ಅದು ಬೇಕು, ಇದು ಬೇಕು ಅಂತ ಎಂದಿಗೂ ಹಪಾಹಪಿಸಿದವನಲ್ಲ ವ್ಯಾಸ. ಅವನಿಗಿದ್ದ ಸಂಪರ್ಕ, ರಾಜಕೀಯ ಪ್ರಭೆಯನ್ನು ಬಳಸಿಕೊಂಡು ಆತ ಎಷ್ಟೆಲ್ಲಾ ಅತ್ಯುನ್ನತ ಪ್ರಶಸ್ತಿ, ಮಣ್ಣು–ಮಸಿ ಅಂತ ಏನೆಲ್ಲವನ್ನೂ ಸುಲಭವಾಗಿ ಪಡೆಯಬಹುದಿತ್ತು. ಆದರೆ, ಅವನಿಗೆ ತಾನು ಮಾಡುವ ಕೆಲಸವೇ ಮುಖ್ಯವಾಗಿತ್ತು. ಅವನಿಗೆ ಗೆಳೆತನ ಮತ್ತು ಪ್ರೀತಿಯೇ ಮುಖ್ಯವಾಗಿತ್ತು. ತನ್ನ ಪ್ರೀತಿಯನ್ನು ತಾನಿದ್ದ ಪರಿಸರದ ಸುತ್ತಲೂ ಹರಡಿದ, ಅದರಲ್ಲಿಯೇ ಗೆದ್ದವನು ಅವನು. ವ್ಯಾಸ ಎಂದಿಗೂ ನನ್ನ ಪ್ರೀತಿಯ ಕವಿ.

ಇಂದು ನಾನು ನಾಗಾಭರಣನಾಗಿ ರೂಪುಗೊಳ್ಳಲು ಕೆಲವು ಶಕ್ತಿಗಳು ಕಾರಣ. ಆ ಶಕ್ತಿಗಳ ಕಾರಣಕ್ಕಾಗಿಯೇ ನಾನು ದೊಡ್ಡದೊಡ್ಡ ಯೋಜನೆಗಳನ್ನು ಮಾಡುವಂತಾಯಿತು. ಅದರಲ್ಲಿ ಸಿ. ಅಶ್ವತ್ಥ ಮುಖ್ಯವಾದವನು. ಸದಾ ಮೂಡಿ, ನಿಷ್ಠುರವಾದಿಯಾಗಿರುತ್ತಿದ್ದ ಅಶ್ವತ್ಥ ನನ್ನ ಏಳು ಸಿನಿಮಾಗಳಿಗೆ ಸಂಗೀತ ನಿರ್ದೇಶಿಸಿದ್ದಾನೆ. ಸಂಗೀತಕ್ಕೆ ಅಶ್ವತ್ಥನಿದ್ದರೆ, ಸಿನಿಮಾ ಗೀತೆಗಳಿಗೆ ವ್ಯಾಸ, ದೊಡ್ಡರಂಗೇಗೌಡ, ಸಿದ್ದಲಿಂಗಯ್ಯ ಮುಖ್ಯವಾದವರು. ಎಚ್ಚೆಸ್ವಿ ಅವರಂತೂ ನನಗೆ ಸಿನಿಮಾವನ್ನೇ ಬರೆದುಕೊಟ್ಟರು. ಕವಿ ಹೃದಯಗಳು ನನ್ನ ಸುತ್ತಮುತ್ತ ಇದ್ದುದ್ದರಿಂದಲೇ ನನಗೆ